ಆ) ಈ ಯೋಜನೆಯನ್ನು ಮಂಜೂರು ಮಾಡುವ ವಿಷಯ ಸರ್ಕಾರದಲ್ಲಿ ಈಗ ಯಾವ ಹಂತದಲ್ಲಿದೆ;

ಈ ಯೋಜನೆಯ ಅಂದಾಜು ಪಟ್ಟಿಯನ್ನು ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯ ತೀರುವಳಿಗಾಗಿ ಸಲ್ಲಿಸಲಾಗಿದೆ.

ಇ) ಈ ಯೋಜನೆಯಿಂದ ಬರಪೀಡಿತ ಪ್ರದೇಶದ ಜಮೀನುಗಳಿಗೆ ನೀರಾವರಿ ಮಾಡುವ ಉದ್ದೇಶ ಸರ್ಕಾರಕ್ಕಿದೆಯೆ;

ಇದೆ

ಈ) ಪ್ರಸಕ್ತ ಸಾಲಿನಲ್ಲಿ ಯೋಜನೆಯನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಪ್ರಸಕ್ತ ಸಾಲಿನಲ್ಲಿ ಕೇಂದ್ರ ಸರ್ಕಾರದ ನೆರವಿನ ಎ.ಐ.ಬಿ.ಪಿ. ಯೋಜನೆಯಡಿ ಈ ಕಾಮಗಾರಿಯನ್ನು ಪ್ರಸ್ತಾಪಿಸಿದ್ದು, ಅನುಮೋದನೆ ದೊರೆತಲ್ಲಿ ಇದೇ ಸಾಲಿನಲ್ಲಿ ಕೈಗೊಳ್ಳಲಾಗುವುದು.

ಕರ್ನಾಟಕ ವಿಧಾನ ಸಭೆ

340 ಶ್ರೀ ಕುಮಾರಸ್ವಾಮಿ ಕೆ.ಜಿ.
ಮಾನ್ಯ ಕಂದಾಯ ಸಚಿವರು.

ಅ) ಶಿವಮೊಗ್ಗ ನಗರದ ಹೊರವಲಯದಲ್ಲಿರುವ ಹಾರೋಬೆನಹಳ್ಳಿ ಸರ್ವೆ ನಂ.III (ಷುಗರ್ ಫಾರಂ) ಜಮೀನು ಸರ್ಕಾರಿ ಪಡಾ ಆಗಿದ್ದು, ಕಂದಾಯ ಇಲಾಖೆಯಲ್ಲಿ ನಿಹಿತವಾಗಿದ್ದು, ಉದ್ದೇಶಿತ ವಿಮಾನ ನಿಲ್ದಾಣ ಹಾಗೂ ಶಿವಮೊಗ್ಗ ಬಿದರೆ ರೈಲ್ವೆ ನಿಲ್ದಾಣ ಸಂಪರ್ಕ ಹೊಂದಿದ ಈ ಪ್ರದೇಶದಲ್ಲಿ ರಾಷ್ಟ್ರಮಟ್ಟದ ಸುಸಜ್ಜಿತ ಕ್ರೀಡಾಂಗಣ, ಈಜುಕೊಳ ಇತ್ಯಾದಿ ನಿರ್ಮಾಣಕ್ಕೆ ಸೂಕ್ತವಾಗಿದ್ದು, ಈ ಪ್ರದೇಶವನ್ನು ಕ್ರೀಡಾ ಇಲಾಖೆಗೆ ಬಿಟ್ಟುಕೊಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ;

ಇಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಆ) ಈ ಜಮೀನನ್ನು ಸ್ವಾಧೀನ ಪಡಿಸಲು ತೆಗೆದುಕೊಂಡ ಕ್ರಮಗಳೇನು ವಿವರಿಸುವುದು?

ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕ ವಿಧಾನ ಸಭೆ

343 ಶ್ರೀ ಕುಮಾರಸ್ವಾಮಿ ಕೆ.ಜಿ.(ಶಿವಮೊಗ್ಗ ಗ್ರಾಮಾಂತರ)
ಮಾನ್ಯ ಕಂದಾಯ ಸಚಿವರು.

ಅ) ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ಮತ್ತು ಭದ್ರಾವತಿ ತಾಲ್ಲೂಕುಗಳಲ್ಲಿ ಜಮೀನು ಖರೀದಿಸಲು ಕೃಷಿಯೇತರ ಆದಾಯ ಹೊಂದಿದ ವ್ಯಕ್ತಿಗಳಿಗೆ ಭೂ

ಸುಧಾರಣಾ ಕಾಯಿದೆಯಡಿ ಎಷ್ಟು ಪ್ರಕರಣಗಳಲ್ಲಿ ಅನುಮತಿ ನೀಡಲಾಗಿದೆ, ಎಷ್ಟು ಪ್ರಕರಣಗಳಲ್ಲಿ ನಿರಾಕರಿಸಲಾಗಿದೆ.

ಅ. 1) ಅನುಮತಿ ನೀಡಿರುವ ಒಟ್ಟು ಪ್ರಕರಣಗಳ ಸಂಖ್ಯೆ : 153

2) ನಿರಾಕರಿಸಿದ ಪ್ರಕರಣಗಳ ಸಂಖ್ಯೆ : 15

ಆ) ಶಿವಮೊಗ್ಗ ಜಿಲ್ಲೆಯಿಂದ ಹೊರಗಿನ ನಿವಾಸಿಯೆಂದು ವಿಳಾಸ ನೀಡಿ ಶಿವಮೊಗ್ಗ: ಭದ್ರಾವತಿಯಲ್ಲಿ ಜಮೀನು ಖರೀದಿಸಲು ಅನುಮತಿ ಪಡೆದವರ ವಿವರಗಳು (ದಿ:1.4.2004 ರಿಂದ 30.6.2009) ನೀಡುವುದು. (ಇದರಲ್ಲಿ ವ್ಯಕ್ತಿಯ ಹೆಸರು, ಉದ್ಯೋಗ, ವಿಳಾಸ, (ಗಾಮ ಸ.ನಂ.) ಇತ್ಯಾದಿ ನಮೂದಿಸುವುದು)?

ಆ) <u>ಹೊರಗಿನ ಜಿಲ್ಲೆಯವರಿಗೆ ಅನುಮತಿ ನೀಡಿರುವ ಪ್ರಕರಣಗಳು:</u>

ತಾಲ್ಲೂಕು	:	ಶಿವಮೊಗ್ಗ
ಗ್ರಾಮ	:	ದೇವಕಾತಿಕೊಪ್ಪ
ಸ.ನಂ. ಮತ್ತು ತರಹೆ	:	40, ತರಿ
ವಿಸ್ತೀರ್ಣ	:	3–30
ಅನುಮತಿ ಪಡೆದವರ ಹೆಸರು :		ರವಿ ಕುಮಾರ್ ಬಿನ್ ವೇಣುಗೋಪಾಲ್ ನಾಗರಾಜ ನಿಲಯ, ಮ.ನಂ.177/3,13ನೇ ಕ್ರಾಸ್ ಸಿ.ವಿ.ರಾಮನಗರ, ಬೆಂಗಳೂರು –93
ಉದ್ಯೋಗ ಮತ್ತು ವರಮಾನ :		ವಿದ್ಯುತ್ ಗುತ್ತಿಗೆದಾರ, 5 ವರ್ಷದ ಸರಾಸರಿ ವರಮಾನ ರೂ.1,04,000–00
ಅನುಮತಿ ನೀಡಿದ ದಿನಾಂಕ	:	16–10–2006.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	344
ಸದಸ್ಯರ ಹೆಸರು	:	ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ)
ಉತ್ತರಿಸುವವರು	:	ಮಾನ್ಯ ಕಂದಾಯ ಸಚಿವರು.
ಉತ್ತರಿಸುವ ದಿನಾಂಕ	:	13/07/2009